## ವಾಹಿನಿಯ ಸಾಹಸಕ್ಕೇನು ಕಾರಣ?

ಕಲಾವಿದರಾಗಿ ಜನಪ್ರಿಯತೆಯ ಉತ್ತುಂಗದಲ್ಲಿರುವ ಸಿನಿಮಾ ನಟರು ಚಾನಲ್ ಸ್ಥಾಪಿಸಲು ಮುಂದಾದುದೇಕೆ? ಅದೊಂದು ದೊಡ್ಡ ಕಥೆ ಎನ್ನುತ್ತಾರೆ 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ'ಯ ಓರ್ವ ಪದಾಧಿಕಾರಿ. ಹೆಸರು ಬಹಿರಂಗಪಡಿಸಲು ಬಯಸದ ಅವರು, 'ಪುನೀತ್, ದರ್ಶನ್, ಯಶ್, ಸುದೀಪ್ ಅವರ ಸಿನಿಮಾಗಳಿಗೆ ಬಹುದೊಡ್ಡ ಮಾರುಕಟ್ಟೆ ಇರುವುದು ನಿಜವಷ್ಟೇ. ಈ ಜನಪ್ರಿಯತೆಯನ್ನು ಬಳಸಿಕೊಂಡು, ಅವರ ಸಿನಿಮಾಗಳನ್ನು ಪ್ರಸಾರ ಮಾಡುವ ವಾಹಿನಿಗಳು ದೊಡ್ಡ ಲಾಭ ಪಡೆಯುತ್ತವೆ. ಆದರೆ, ಸಿನಿಮಾದ ಸ್ಯಾಟಲೈಟ್ ಹಕ್ಕುಗಳ ಖರೀದಿ ಸಂದರ್ಭದಲ್ಲಿ ಮಾತ್ರ ಚೌಕಾಸಿ ಮಾಡುತ್ತವೆ. ಅಲ್ಲದೆ, ಈ ನಾಯಕರು ತಮ್ಮ ವಾಹಿನಿಗಳ ಜೊತೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಷರತ್ತು ಹಾಕುತ್ತವೆ. ವಾಹಿನಿಗಳ ಈ ಧೋರಣೆಯಿಂದ ನಾಯಕನಟರು ತಮ್ಮದೇ ಆದ ವಾಹಿನಿಯನ್ನು ಆರಂಭಿಸಲು ಯೋಚನೆ ಮಾಡಿದ್ದಾರೆ' ಎನ್ನುತ್ತಾರೆ.

ಅರವತ್ತರ ದಶಕದಲ್ಲಿ, 'ಕನ್ನಡ ಚಲನಚಿತ್ರ ಕಲಾವಿದರ ಸಂಘ'ದ ಹೆಸರಿನಲ್ಲಿ, ರಾಜಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣ ಹಾಗೂ ನರಸಿಂಹರಾಜು ಅವರು ಅರವತ್ತರ ದಶಕದಲ್ಲಿ 'ರಣಧೀರ ಕಂಠೀರವ' ಸಿನಿಮಾ ನಿರ್ಮಿಸಿದ್ದನ್ನು ನೆನಪಿಸುವ ಅವರು, ಆದಾದ ನಂತರ ಇಂಥ ಪ್ರಯೋಗ ದೊಡ್ಡ ಪ್ರಮಾಣದಲ್ಲಿ ಕನ್ನಡ ದೃಶ್ಯಮಾಧ್ಯಮದಲ್ಲಿ ನಡೆಯುತ್ತಿರುವುದು ಈಗಲೇ ಎಂದು ಅಭಿಪ್ರಾಯಪಡುತ್ತಾರೆ.

**ಅಭಿಮಾನಿಗಳೇ ನಮ್ಮನೆ ದೇವ್ರು ಎಂದ ಅಪ್ಪಾಜಿ ಮಾತು ನಮಗೆಲ್ಲ ದಾರಿ ದೀಪ. ಹೊಸ ಚಾನಲ್‌ಗೆ ಕೂಡ ಅಭಿಮಾನಿಗಳೇ ಬಂಡವಾಳ. ಅವರ ಪ್ರೀತಿಯೇ ಶ್ರೀರಕ್ಷೆ.**
**-ಪುನೀತ್**



ಕ್ಷೇತ್ರದಲ್ಲಿ ಇತಿಹಾಸ ಬರೆಯಲಿದೆ ಎಂದು ಸದಾಶಿವನಗರದ ಮೂಲಗಳು ತಿಳಿಸಿವೆ. ನಿರ್ದೇಶಕ ಟಿ.ಎಸ್. ನಾಗಾಭರಣ ಅವರು ಹೇಳಿದ ಕಥೆಯೊಂದು ಮೂವರು ನಾಯಕರಿಗೂ ಇಷ್ಟವಾಗಿದ್ದು, ಆರಂಭಿಕ ಕಂತುಗಳ ಚಿತ್ರಕಥೆ ಈಗಾಗಲೇ ಸಿದ್ಧವಾಗಿದೆಯಂತೆ. ದುಬಾರಿ ಬಜೆಟ್ ಹಾಗೂ ಅದ್ದೂರಿ ತಾರಾಗಣದ ಈ ಕಥನ, ಧಾರಾವಾಹಿಗಳ ಪರಿಕಲ್ಪನೆಯನ್ನೇ ಬದಲಿಸುವ ನಿರೀಕ್ಷೆಯಿದೆ. ಲೀಲಾವತಿ, ಜಯಂತಿ, ಭಾರತಿ ವಿಷ್ಣುವರ್ಧನ್ ಅವರೊಂದಿಗೆ ರಚಿತಾ ರಾಮ್ ತಾರಾಗಣದಲ್ಲಿರುವ ಪ್ರಸಿದ್ಧ ಕಲಾವಿದರು. ಸದ್ಯಕ್ಕೆ ಅಭಿನಯದಿಂದ ದೂರವಿರುವ ರಮ್ಯಾ ಅವರು ಕೂಡ ಧಾರಾವಾಹಿಗಾಗಿ ಬಣ್ಣ ಹಚ್ಚುವ ನಿರೀಕ್ಷೆಯಿದೆ. ನಾಗಾಭರಣ ಅವರೇ ಧಾರಾವಾಹಿಯನ್ನು ನಿರ್ದೇಶಿಸಲಿದ್ದು, ಅವರಿಗೆ ಯುವ ನಿರ್ದೇಶಕರ ತಂಡವೊಂದು ನೆರವಾಗಲಿದೆ ಎನ್ನಲಾಗಿದೆ.

ಈ ನಟರ ಕಾಂಬಿನೇಷನ್‌ನ ಸಿನಿಮಾ ತಯಾರಿಸುವುದೇ ಈವರೆಗೆ ಯಾರಿಗೂ ಸಾಧ್ಯವಾಗಿಲ್ಲ ಎನ್ನುವ ಹಿನ್ನೆಲೆಯಲ್ಲಿ, ಉದ್ದೇಶಿತ ಧಾರಾವಾಹಿ ಕನ್ನಡ ಮಾತ್ರವಲ್ಲದೆ ಬೇರೆ ಭಾಷೆಗಳ ಪ್ರೇಕ್ಷಕರ ಗಮನಸೆಳೆಯುವುದೂ ಖಚಿತ. ಈ ಧಾರಾವಾಹಿಯನ್ನು ಹಿಂದಿ, ತೆಲುಗು, ತಮಿಳು, ಮಲಯಾಳಂ ಸೇರಿದಂತೆ ಎಂಟು ಭಾಷೆಗಳಿಗೆ ಡಬ್ ಮಾಡುವ ಯೋಚನೆಯೂ ವಾಹಿನಿಗಿದೆ.

ದುನಿಯಾ ಸೂರಿ ಅವರು ಹೊಸ ವಾಹಿನಿಗಾಗಿ ಕ್ರೈಂ ಕಥನವೊಂದನ್ನು ರೂಪಿಸುತ್ತಿದ್ದಾರೆ ಎನ್ನಲಾಗಿದ್ದು, ಇದಕ್ಕೆ ನಟ ವಸಿಷ್ಠ ಸಿಂಹ ಅವರು ಧ್ವನಿ ನೀಡಲಿದ್ದಾರೆ. ಯುವ ನಿರ್ದೇಶಕರಾದ ಸಿಂಪಲ್ ಸುನಿ, ಸತ್ಯಪ್ರಕಾಶ್, ಹೇಮಂತ್ ಅವರು ಧಾರಾವಾಹಿಗಳನ್ನು ನಿರ್ದೇಶಿಸಲಿದ್ದಾರೆ. ರಂಗಾಯಣ ರಘು ಹಾಗೂ ನಿರ್ದೇಶಕ ಗುರುಪ್ರಸಾದ್ ಅವರು ವಾರಾಂತ್ಯದಲ್ಲಿ ಹಾಸ್ಯೋತ್ಸವಗಳನ್ನು ನಡೆಸಿಕೊಡಲಿದ್ದಾರೆ.

ಈವರೆಗೆ ಬೇರೆ ಬೇರೆ ವಾಹಿನಿಗಳಲ್ಲಿನ ರಿಯಾಲಿಟಿ ಶೋಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಸಿದ್ಧ ನಟರು ಹೊಸ ವಾಹಿನಿಯೊಂದಿಗೆ ಗುರ್ತಿಸಿಕೊಳ್ಳಲು ತುದಿಗಾಲಲ್ಲಿ ನಿಂತಿದ್ದಾರೆ ಎನ್ನಲಾಗಿದೆ. ಹೀಗೇನಾದರೂ ಆದಲ್ಲಿ ಕನ್ನಡದ ಉಳಿದ ವಾಹಿನಿಗಳು ಸ್ಯಾಂಡಲ್‌ವುಡ್ ಸೆಲೆಬ್ರಿಟಿಗಳ ಕೊರತೆ ಎದುರಿಸುವುದು ಖಚಿತ.

## ಚತುರ್ಮುಖನಾಗಿ ಯಶ್?

ತ್ರಿಮೂರ್ತಿಗಳ ಕೂಟಕ್ಕೆ ಯಶ್ ಅವರನ್ನು ಸೇರಿಸಿಕೊಳ್ಳುವ ಪ್ರಯತ್ನವೂ ನಡೆದಿದೆ ಎನ್ನಲಾಗಿದೆ. ಸದ್ಯಕ್ಕೆ ಯಶ್ ಅವರು ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸುಮಲತಾ ಅವರ ಪರವಾಗಿ ಪ್ರಚಾರಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಈ ಪ್ರಚಾರಕಾರ್ಯದ ನಡುವೆಯೇ ದರ್ಶನ್ ಹಾಗೂ ಯಶ್ ನಡುವೆ ವಾಹಿನಿಯ ಕುರಿತು ಮಾತುಕತೆ ನಡೆದಿದೆ ಎನ್ನಲಾಗಿದೆ. ರಾಜ್‌ಕುಮಾರ್ ಕುಟುಂಬದೊಂದಿಗೆ ಯಶ್ ಅವರು ಆಪ್ತಸಂಬಂಧ ಹೊಂದಿರುವುದರಿಂದ, ಪುನೀತ್ ಅವರು ಕೂಡ ಯಶ್ ಅವರೊಂದಿಗೆ ಮಾತುಕತೆ ನಡೆಸುವ ಸಾಧ್ಯತೆಯಿದೆ.

ಹೊಸ ವಾಹಿನಿಯ ಮೂಲಕ ಮುಂಬರುವ ಕನ್ನಡ ರಾಜ್ಯೋತ್ಸವ ಕನ್ನಡ ಪ್ರೇಕ್ಷಕರ ಪಾಲಿಗೆ ಅವಿಸ್ಮರಣೀಯವಾಗುವ ಎಲ್ಲ ಸಾಧ್ಯತೆಗಳಿವೆ. ಈ ವಾಹಿನಿಯ ಮೂಲಕ ಕನ್ನಡದ ತಾರಾ ವರ್ಚಸ್ಸಿನ ನಟರು ತಮ್ಮ ಕನ್ನಡಿಗರ ಮನೆ–ಮನಗಳಿಗೆ ಮತ್ತಷ್ಟು ಹತ್ತಿರವಾಗುವ ಪ್ರಯತ್ನದಲ್ಲಿದ್ದಾರೆ.

77ನೇ ಪುಟ ನೋಡಿ...